**ಪ್ರಮಾಣ ವಚನ ಬೋಧಿಸಿದ ದಿನಾಂಕಃ 06.05.2023**

**ಪಾಟೀ ಸವಾಲುಃ ಶ್ರೀ ಆರ್.ಕೆ. ವಕೀಲರಿಂದ 1 ನೇ ಆರೋಪಿಯ ಪರವಾಗಿಃ**

1. ನಾನು ಎಸ್ ಎಸ್ ಎಲ್ ಸಿ ವರೆಗೂ ಓದಿಕೊಂಡಿರುತ್ತೇನೆ. ನನ್ನ ತಂದೆ 1998 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮರಣ ಹೊಂದಿದ ನಂತರ ಅನುಕಂಪದ ಆಧಾರದ ಮೇಲೆ ನನಗೆ 1999 ರಲ್ಲಿ ನನ್ನ ತಂದೆ ಕೆಲಸ ಮಾಡುತ್ತಿದ್ದ ಇಲಾಖೆಯಲ್ಲಿ ಕೆಲಸವನ್ನು ನೀಡಿರುತ್ತಾರೆ. ಅದಿಂನಿಂದಲೂ ಇಲ್ಲಿಯವರೆಗೂ ನೀರಾವರಿ ಇಲಾಖೆ, ಗೊರುರು ನಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ.

2. ನನ್ನ ತಮ್ಮ 1 ರಿಂದ 10 ನೇ ತರಗತಿಯನ್ನು ಯಾವ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತಾನೆ ಎಂದು ನನಗೆ ಮಾಹಿತಿ ಇಲ್ಲ. ನನ್ನ ಮೃತ ತಮ್ಮ ಆರ್ ಅನೀಲ್ ಗೆ ಯಾರ್ಯಾರು ಸ್ನೇಹಿತರು ಇದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ತಮ್ಮ ಯಾವ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನನ್ನ ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅವನಿಗೆ ಯಾರ್ಯಾರು ಸ್ನೇಹಿತರು ಇದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನಗೆ ಮಾಹಿತಿ ಇರುವ ಪ್ರಕಾರ ನನ್ನ ತಮ್ಮ ಕಾಲೇಜು ಮುಗಿಸಿದ ಮೇಲೆ ಐಸಿಐಸಿಐ ಮತ್ತು ಕೋಟ್ಯಾಕ್ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ದ. ನನ್ನ ತಮ್ಮ ಸದರಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾಗ ಅವನ ಸಹದ್ಯೋಗಿಗಳ ಬಗ್ಗೆ ಮತ್ತು ಆತನ ಸ್ನೇಹಿತರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

3. ನನ್ನ ತಮ್ಮ ಮೃತ ಪಡುವ ಮೂರು ತಿಂಗಳುಗಳ ಹಿಂದೆ ಆತನಿಗೆ ನಿಶ್ಚಿತಾರ್ಥ ಮಾಡಿದ್ದೇವು ಎಂದರೆ ಸರಿ. ಹುಡುಗಿ ಶನಿವಾರಸಂತೆ ಗ್ರಾಮದವರಾಗಿದ್ದ ಕಾರಣ ನಿಶ್ಚಿತಾರ್ಥವನ್ನು ಸದರಿ ಗ್ರಾಮದಲ್ಲೇ ಮಾಡಿರುತ್ತೇವೆ. ನಿಶ್ಚಿತಾರ್ಥ ಆದ ಬಗ್ಗೆ ಫೋಟೋಗಳು ನಮ್ಮ ಬಳಿ

ಇರುವುದಿಲ್ಲ.

4. ನನ್ನ ತಮ್ಮನ ಗುರುತು ಕೊಡುವಾಗ ನಿಶಾನೆ ಪಿ-6 ರಲ್ಲಿ ಬಲ ಮತ್ತು ಎಡ ಭುಜದ ಮೇಲೆ ಸುಟ್ಟ ಗಾಯದ ಗುರುತುಗಳು ಮತ್ತು ದೇವರ ಮುದ್ರೆ ಗುರುತು ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ದೂರು ಕೊಡುವ ಸಂದರ್ಭದಲ್ಲಿ ನನ್ನ ಮೃತ ತಮ್ಮ ಇಂತವರ ಜೊತೆ ಹೋದನು ಎಂದು ಮತ್ತು ಆ ವ್ಯಕ್ತಿಯ ಚಹರೆಯನ್ನು ಹೇಳಿರುವುದಿಲ್ಲ ಎಂದರೆ ಸರಿ. ಶವತನಿಖಾ ಕಾಲದಲ್ಲಿ ನಾನು ಪೊಲೀಸರಿಗೆ ನನ್ನ ಮೃತ ತಮ್ಮನನ್ನು ಯಾರೋ ದುಷ್ಕರ್ಮಿಗಳು ಯಾವುದೋ ದುರುದ್ದೇಶದಿಂದ ಎಲ್ಲಿಗೋ ಕರೆದುಕೊಂಡು ಹೋಗಿ ಹರಿತವಾದ ಆಯುಧಗಳಿಂದ ಹೊಡೆದು, ತಲೆಗೆ ತೀವ್ರವಾಗಿ ರಕ್ತ ಗಾಯ ಪಡಿಸಿ ಕೊಲೆ ಮಾಡಿ, ಕೊಲೆ ಕೃತ್ಯವನ್ನು ಮರೆಮಾಚಲು, ಮೃತದೇಹವನ್ನು ದಫನ ಮಾಡಲು ಕಗ್ಗಲೀಪುರ ಠಾಣಾ ವ್ಯಾಪ್ತಿಯ ಸ್ಮಶಾನಕ್ಕೆ ಸಾಗಿಸಿ, ನಂತರ ಮೃತದೇಹವನ್ನು ಅಲ್ಲೇ ಬಿಟ್ಟು ಹೋಗಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

5. ಶವತನಿಖಾ ಸಮಯದಲ್ಲಿ ನನ್ನ ತಮ್ಮ ಜೊತೆ ನಿಶ್ಚಿತಾರ್ಥವಾದ ಹುಡುಗಿ ಬಂದಿರಲಿಲ್ಲ ಎಂದರೆ ಸರಿ. ನನ್ನ ತಮ್ಮನ ಅಂತೀಮ ವಿಧಿ ವಿಧಾನ ಮಾಡುವಾಗ ಮತ್ತು 11 ನೇ ದಿನದ ಶ್ರದ್ಧಾ ಕಾರ್ಯಕ್ರಮಕ್ಕೆ ಆ ಹುಡುಗಿ ಬಂದಿರಲಿಲ್ಲ ಎಂದರೆ ಸರಿ . ಆರೋಪಿತರು ದಸ್ತಗಿರಿ ಆದ ಮೇಲೆ ಒಂದು ಬಾರಿ ಆ ಹುಡುಗಿ ನಮಗೆ ಕರೆ ಮಾಡಿದ್ದಳು. ಅದನ್ನು ಹೊರತುಪಡಿಸಿ ಆ ಹುಡುಗಿ ನಮ್ಮ ಜೊತೆ ಮಾತನಾಡಿರುವುದಿಲ್ಲ. ಆ ಹುಡಗಿ ಈಗ ಎಲ್ಲಿ ವಾಸ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಕೇಸಿನ ಬಗ್ಗೆ ಆ ಹುಡುಗಿ ನಮ್ಮ ಜೊತೆ ಮಾತನಾಡಿರುವುದಿಲ್ಲ. ನನ್ನ ತಮ್ಮ ಮೃತಪಟ್ಟಿರುವ ವಿಚಾರವನ್ನು ನಾವು ಆ ಹುಡುಗಿಗೆ ತಿಳಿಸಿರುತ್ತೇವೆ.

6. ಈ ಕೇಸಿನ ವಿಚಾರದಲ್ಲಿ ನಾನು 2 ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಮೊದಲನೇ ಬಾರಿ, ಪೊಲೀಸರವರು ಮೃತ ದೇಹವನ್ನು ಗುರುತು ಹಚ್ಚಲು ಹೇಳಿದ್ದರಿಂದ ನಾನು ಆ

ಸಂದರ್ಭದಲ್ಲಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಂತರ 2 ನೇ ಬಾರಿ, ಶವತನಿಖಾ ವರದಿಯ ಸಮಯದಲ್ಲಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಅದನ್ನು ಹೊರತುಪಡಿಸಿ ನಾನು ಮತ್ತೇ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಾನು ಹೇಳಿಕೆ ಕೊಡುವ ಸಂದರ್ಭದಲ್ಲಿ ನನ್ನ ತಾಯಿಯು ಸಹ ಹೇಳಿಕೆ ನೀಡಿರುತ್ತಾರೆ. ನನ್ನ ತಾಯಿ ಬೇರೆ ದಿವಸ ಹೋಗಿ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

7. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೇ, ನನ್ನ ತಾಯಿಯ ಸದರಿ ಆರೋಪಿಯನ್ನು ನೋಡಿ ಈತನೇ ದಿನಾಂಕ 03.12.2017 ರಂದು ನಮ್ಮ ಮನೆಯ ಹತ್ತಿರ ಬಂದು ನನ್ನ ತಮ್ಮನನ್ನು ಬೈಕ್ ನಲ್ಲಿ ಕರೆದುಕೊಂಡು ಹೋದ ವ್ಯಕ್ತಿ ಎಂದು ಪೊಲೀಸರಿಗೆ ತಿಳಿಸಿದರು ಎಂಬ ವಿಚಾರವನ್ನು ನಾನು ನನ್ನ ದೂರಿನಲ್ಲಾಗಲೀ ಮತ್ತು ಕಾಣೆಯಾದ ದಿವಸ ಕೊಟ್ಟ ಹೇಳಿಕೆಯಲ್ಲಾಗಲೀ ಮತ್ತು ಶವತನಿಖಾ ಸಮಯದಲ್ಲಿ ನೀಡಿದ ಹೇಳಿಕೆಯಲ್ಲಾಗಲೀ ಮತ್ತು ಪೊಲೀಸರವರ ಮುಂದೆ ನೀಡಿದ ಮುಂದುವರೆದ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿ.

8. ಪೊಲೀಸರವರು ನಮ್ಮನ್ನು ಠಾಣೆಗೆ ಕರೆಸಿ ಆರೋಪಿತರನ್ನು ತೋರಿಸಿ ಇವರೇ ನಿಮ್ಮ ತಮ್ಮನನ್ನು ಕೊಲೆ ಮಾಡಿರುತ್ತಾರೆ ಎಂದು ಪೊಲೀಸರು ನಮಗೆ ತಿಳಿಸಿದರು ಎಂದರೆ ಸರಿ. ನಾನು ಪೊಲೀಸ್ ಠಾಣೆಯಲ್ಲಿ ಆರೋಪಿತರನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು 1 ನೇ ಆರೋಪಿ ನನಗೆ ತಾನು ಮತ್ತು ಚಾಸಾ-9 ನೇತ್ರಾ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇವು, ತಾನು ಆತನನ್ನು ಅವಳನ್ನು ಪ್ರೀತಿ ಮಾಡತ್ತಿದ್ದು ಆದರೆ ಅವನ ಪ್ರೀತಿಯನ್ನು ಆಕೆ ತಿರಸ್ಕಾರ ಮಾಡಿದ್ದಳು, ಆದ್ದರಿಂದ ನನ್ನ ತಮ್ಮನನ್ನು ಕೊಂದರೆ ಚಾಸಾ-9 ನೇತ್ರಾ ನಾನು ಹೇಳಿದ ಹಾಗೇ ಕೇಳಬಹುದು ಎಂದು ಕೊಲೆ ಮಾಡಿರುತ್ತೇನೆ ಎಂದು ತಿಳಿಸಿರುವುದಿಲ್ಲ, ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

9. ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.5 ರಲ್ಲಿ ಹೇಳಿದ ಹಾಗೇ, ಕೃತ್ಯ ಮಾಡುವ ಮೊದಲು 1 ನೇ ಆರೋಪಿ, 2 ನೇ ಆರೋಪಿಯಿಂದ ಬೇರೆಯವರ ಹೆಸರಿನಲ್ಲಿ ಸಿಮ್ ನ್ನು ಮತ್ತು ಮೊಬೈಲ್ ನ್ನು ಖರೀದಿ ಮಾಡಿ, ಸದರಿ ಸಿಮ್ ನಿಂದ ನನ್ನ ತಮ್ಮನಿಗೆ ನಾನು ಹಾಸನದ ಯೋಗೇಶ್ ಎಂದು ಹೇಳಿ ಕರೆ ಮಾಡಿ, ಪರಿಚಯ ಮಾಡಿಕೊಂಡಿರುತ್ತಾನೆ, 1 ನೇ ಆರೋಪಿ ನನಗೆ ನನ್ನ ತಮ್ಮನಿಗೆ ವಿದ್ಯುತ್ ಶಾಖ ಕೊಟ್ಟು ಕೊಲೆ ಮಾಡಲು ಅದಕ್ಕೆ ಬೇಕಾದ ಗ್ಲೌಸ್, ವೈಯರ್, ಕೋಲುಗಳನ್ನು ತೆಗೆದು ಇಟ್ಟುಕೊಂಡಿದ್ದೆ ಎಂದು ತಿಳಿಸಿದನು, ನಂತರ ದಿನಾಂಕ 03.12.2017 ರಂದು 1 ನೇ ಆರೋಪಿ ನನ್ನ ತಮ್ಮನ ಮನೆಯ ಬಳಿ ಬಂದು, ನನ್ನ ತಮ್ಮನಿಗೆ ವಿದ್ಯುತ್ ಕೆಲಸ ಇರುವುದಾಗಿ ಹೇಳಿ, ನನ್ನ ತಮ್ಮನನ್ನು ಕಗ್ಗಲೀಪುರದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಸದರಿ ಸ್ಥಳದಲ್ಲಿ ಮೊದಲೇ ಸಿದ್ಧಪಡಿಸಿ ಇಟ್ಟುಕೊಂಡಿದ್ದ ವಿದ್ಯುತ್ ವೈಯರ್ ನ್ನು ನನ್ನ ತಮ್ಮನ ತಲೆಯ ಹಿಂಭಾಗಕ್ಕೆ ಸ್ಪರ್ಶಿಸಿ, ಆಗ ನನ್ನ ತಮ್ಮ ಸ್ಥಳದಲ್ಲಿ ಕುಸಿದು ಹೋದ ಎಂದು 1 ನೇ ಆರೋಪಿ ನನಗೆ ತಿಳಿಸಿದನು, ನಂತರ 1 ನೇ ಆರೋಪಿ ನನ್ನ ತಮ್ಮ ಸತ್ತಿರುವುದನ್ನು ಖಚಿತ ಪಡಿಸಿಕೊಂಡು, ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ತೆಗೆದುಕೊಂಡು ಸ್ಥಳದಿಂದ ಹೊರಟು ಹೋದೆವು ಎಂದು 1 ನೇ ಆರೋಪಿ ನನಗೆ ತಿಳಿಸಿದನು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಸದರಿ ವಿಚಾರಗಳನ್ನು 1 ನೇ ಆರೋಪಿ ನನಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಮೇಲೆ ಹೇಳಿದ ಸದರಿ ವಿಚಾರಗಳನ್ನು ನನ್ನ ಮುಂದೆ ಮತ್ತು ನನ್ನ ತಾಯಿಯ ಮುಂದೆ ಹೇಳಿರುವುದಿಲ್ಲ, ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನು ನಮಗೆ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ನನ್ನ ತಮ್ಮ ಸಾವಿಗೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರವರು ಆರೋಪಿತರ ವಿರುದ್ಧ ಸುಳ್ಳು ಸ್ಪ್ರಕರಣ ದಾಖಲು

ಮಾಡಿರುತ್ತಾರೆ, ಅದರ ಅನುಗುಣವಾಗಿ ನಾನು ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಹೆಚ್.ಕೆ. ವಕೀಲರಿಂದ 2 ನೇ ಆರೋಪಿಯ ಪರವಾಗಿಃ**

1. ನಾನು ನನ್ನ ಮುಖ್ಯ ವಿಚಾರಣೆಯ 5 ನೇ ಪ್ಯಾರಾ ದಲ್ಲಿ ಹೇಳಿದ ಹಾಗೇ, 1 ನೇ ಆರೋಪಿ 2 ನೇ ಆರೋಪಿಯಿಂದ ಬೇರೆಯವರ ಹೆಸರಿನಲ್ಲಿ ಸಿಮ್ ನ್ನು ಮತ್ತು ಮೊಬೈಲ್ ನ್ನು ಖರೀದಿ ಮಾಡಿರುವ ವಿಚಾರ ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿಗೂ ಮತ್ತು ನನ್ನ ತಮ್ಮನ ಕೊಲೆಗೂ ಯಾವುದೇ ರೀತಿ ಸಂಬಂಧವಿರದೇ ಇದ್ದರು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.